# ಭಾರತೀಯ ಸಂಸ್ಕೃತಿಯಲ್ಲಿ ಜಾನಪದ

ಡಾ. ಡಿ.ಕೆ.ರಾಜೇಂದ್ರ

ಎಲ್ಲ ಸಂಸ್ಕೃತಿಗಳಲ್ಲೂ ಮಾರ್ಗ ಮತ್ತು ದೇಸಿ ಎಂಬ ಎರಡು ರೂಪಗಳಿರುತ್ತವೆ. ಜನಸಾಮಾನ್ಯರ ಸಂಸ್ಕೃತಿಯೇ ದೇಸಿ. ಭಾರತದಲ್ಲಿನ ವೈವಿಧ್ಯಮಯವಾದ ಸಂಸ್ಕೃತಿಯಲ್ಲಿ ಕಂಡುಬರುವ ಜಾನಪದ ವೈವಿಧ್ಯ ಅತ್ಯಂತ ಸಮೃದ್ಧವಾದದ್ದು. ಇವುಗಳ ಅಧ್ಯಯನ ಒಂದು ಅಸಾಧಾರಣ ಅನುಭವವಾಗಿ ಮಾರ್ಪಡುವುದು. ಈ ಕುರಿತು ಬರೆದಿರುವ ಲೇಖಕರು ಕನ್ನಡ ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ವಾಂಸರು. ಅನೇಕ ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.



**ಸಂ**ಸ್ಕೃತಿ ಎಂಬ ಪದಕ್ಕೆ ವಿಶೇಷವಾದ ಅರ್ಥವಿರುವಂತೆ ವಿಶಾಲವಾದ ಅರ್ಥವೂ ಇದೆ. ಅದು ಒಳಗೊಳ್ಳದ ವಿಷಯವೇ ಇಲ್ಲ ಎನ್ನುವಷ್ಟು ಅದು ಸಂಕೀರ್ಣವಾದದ್ದು. ಖ್ಯಾತ ಮಾನವ ಶಾಸ್ತ್ರಜ್ಞ ಇ.ಬಿ.ಟೇಲರ್ ಹೇಳುವಹಾಗೆ ; ''That complex whole which includes knowledge, belief, art, morals, law, custom and any other capabilities and habits aquired by man as a member of a society '' ಎಂಬ ಮಾತು ಗಮನಾರ್ಹ. ಒಬ್ಬ ವ್ಯಕ್ತಿ ಒಂದು ಸಮಾಜದ ಸದಸ್ಯನಾಗಿ ಪಡೆದುಕೊಳ್ಳುವ ಪ್ರತಿಯೊಂದೂ ಸಂಸ್ಕೃತಿಯ ವ್ಯಾಪ್ತಿಗೆ ಬರುತ್ತದೆ.

ಸಮಾಜದಲ್ಲಿ ಹುಟ್ಟಿಕೊಂಡ ಜೀವಪರವಾದ ನಿಲುವುಗಳು, ಅವನ್ನು ಆಧರಿಸಿದ ಜೀವನ ಮೌಲ್ಯಗಳು ಮಾನವ ಸಮಾಜದ ಅಡಿಗಲ್ಲಾಗಿ ಸಂಸ್ಕೃತಿಯ ಹುಟ್ಟಿಗೆ ಕಾರಣವಾಗುತ್ತವೆ. ಮ್ಯಾಥ್ಯೂ ಅರ್ನಾಲ್ಡ್ ಸಂಸ್ಕೃತಿಯನ್ನು ಕುರಿತು ಹೇಳಿರುವ ಮೃಗತ್ವವನ್ನು ಕಳೆದು ಮಾನವೀಯತೆಯನ್ನು ಬಿತ್ತುವುದೇ ಸಂಸ್ಕೃತಿ ಎಂಬ ಮಾತಿನ ಹಿನ್ನೆಲೆಯಲ್ಲಿ ಇದು ಸ್ಪಷ್ಟ. ಬದುಕು ಹೇಗಿರಬೇಕು? ಹೇಗಿದ್ದರೆ ಚೆನ್ನ? ಅದನ್ನು ಸುಂದರಗೊಳಿಸುವುದು ಹೇಗೆ? ಅದರ ಅಂದ ಕೆಡದಂತೆ ನೋಡಿಕೊಳ್ಳುವುದು ಹೇಗೆ? ಮುಂತಾದ ಆಲೋಚನೆಗಳ ಹಿನ್ನೆಲೆಯಲ್ಲಿ ರೂಪುಗೊಂಡದ್ದೇ – ಸಂಸ್ಕೃತಿ. ಸಂಸ್ಕೃತಿ ಆತ್ಮವ್ಯವಸಾಯದ ಫಲ ಎಂಬ ಮಾತಿನಲ್ಲಿ ಇವೆಲ್ಲವೂ ಹುದುಗಿರುವುದನ್ನು ಕಾಣಬಹುದು.ತನ್ನ ಜೀವನವನ್ನು ಹಸನು ಗೊಳಿಸಿಕೊಳ್ಳಲು ಮನುಷ್ಯ ಆರಂಭದಿಂದಲೂ ಆಲೋಚಿಸುತ್ತಾ ಬಂದಿದ್ದಾನೆ. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡು ಅದಕ್ಕೆ ಯಾವ ಧಕ್ಕೆಯೂ ಉಂಟಾಗದಂತೆ ಎಚ್ಚರ ವಹಿಸಿದ್ದಾನೆ. ಈ ಎಲ್ಲದರ ಪರಿಣಾಮವೇ ಸಂಸ್ಕೃತಿಯ ನಿರ್ಮಾಣ.

ಕಲೆಗಳು ದಾಖಲೆಗೊಂಡ ಜೀವನಮೌಲ್ಯಗಳ ಉಗ್ರಾಣ ಎಂಬ ಮಾತಿದೆ. ಅದು ಕಲೆಗಳಿಗೆ ಅಷ್ಟೇ ಅಲ್ಲ ಸಾಹಿತ್ಯ ಮತ್ತಿತರ ಎಲ್ಲಾ ಪ್ರಕಾರಗಳಿಗೂ ಅನ್ವಯಿಸುತ್ತದೆ. ಕಾವ್ಯ ಹಾಗೂ ಬದುಕಿನ ನಡುವೆ ಒಡನಾಟವಿದೆ ಎಂಬ ಎ.ಸಿ. ಬ್ರಾಡ್ಲೆ ಮಾತಿನ ಅರ್ಥ ವ್ಯಾಪ್ತಿ ಮಾನವನ ಬದುಕಿನಲ್ಲಿ ಇವೆಲ್ಲವುಗಳ ಪಾತ್ರ ಹಿರಿದಾದುದು ಎಂಬುದಕ್ಕೆ ಸಾಕ್ಷಿ. ಬದುಕು ಎಂದಿಗೂ ಕೇವಲ ಹೊಟ್ಟೆ ಪಾಡಿನ ಪ್ರಶ್ನೆಯಾಗಿ ಉಳಿದುಬಂದಿಲ್ಲ. ಹಾಗಿದ್ದಿದ್ದರೆ ಜೀವನ ರಂಗದಲ್ಲಿ ಇಷ್ಟೆಲ್ಲಾ ಹೋರಾಟದ ಅಗತ್ಯ ಇರುತ್ತಿರಲಿಲ್ಲ. ಅದು ಮಾನವ ಸಮಾಜದ ಆರಂಭದಿಂದಲೂ ಒಂದಲ್ಲ ಹಲವು ವಿಧಗಳಲ್ಲಿ ಗೋಚರಿಸುತ್ತ ಬಂದಿದೆ.ಆದಿಮಾನವನ ಕಾಲದಿಂದಲೂ ಬಳಸುತ್ತಿದ್ದ ಒಂದೊಂದು ಸಣ್ಣ ವಸ್ತುವಿನಲ್ಲಿಯೂ ಯಾವಾಗ ಆಯ್ಕೆಯ ವಿಧಾನ ತಲೆಯೆತ್ತಿತು ಅಲ್ಲಿಂದಲೇ ಒಂದು ರೀತಿಯ ಕಲಾ ಪ್ರಜ್ಞೆ, ಸೌಂದರ್ಯ ಪ್ರಜ್ಞೆ, ಹಾಗೂ ಸಾಂಸ್ಕೃತಿಕ ಪ್ರಜ್ಞೆ ಎಂಬುದು ಅವನಲ್ಲಿತ್ತೆಂಬುದು ಸ್ಪಷ್ಟ. ಪ್ರದೇಶದಿಂದ ಪ್ರದೇಶಕ್ಕೆ ಅದು ವ್ಯತ್ಯಾಸ ಆಗಿರಬಹುದು ಅಷ್ಟೆ. ಹಾಗೆ ಅದೇ ವೈವಿಧ್ಯತೆಗೆ ಕಾರಣವಾಗಿರಲೂಬಹುದು.

ಒಬ್ಬ ವ್ಯಕ್ತಿ ಅಥವಾ ಒಂದು ದೇಶ ಒಂದು ನಿರ್ದಿಷ್ಟ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಾಗೆ ಅಥವಾ ಪ್ರತಿನಿಧಿಸುವ ಹಾಗೆ ಒಂದು ಸಂಸ್ಕೃತಿ ಕೂಡ ಅಂಥ ವ್ಯಕ್ತಿಯನ್ನು, ದೇಶವನ್ನು ಪ್ರತಿನಿಧಿಸುತ್ತದೆ. ಆತನ ಭಾಷೆ, ಆಹಾರ ಪದ್ಧತಿ, ಆಚಾರ-ವಿಚಾರ, ಕಲೆ-ಸಾಹಿತ್ಯ ಇತ್ಯಾದಿ ಪ್ರಾದೇಶಿಕತೆಯ ಕಾರಣದಿಂದ ಎಲ್ಲದರಲ್ಲಿಯೂ ಅದು ಅನಾವರಣಗೊಳ್ಳುತ್ತದೆ. ಈ ವೈವಿಧ್ಯ ಉಂಟಾಗುವುದು ಅಲ್ಲಿಯ ಪ್ರಾದೇಶಿಕತೆಯ ಹಾಗು ಕಾಲದ ಅಂತರ ಮತ್ತು ಜನರ ಮನೋಭಾವದ ಕಾರಣದಿಂದ.

ಭಾರತೀಯ ಭಾಷೆಗಳು ಹಲವು, ಸಾಹಿತ್ಯ ಒಂದು (Indian languages are many, but literature is one)- ಇದು ಸಾಹಿತ್ಯಕ್ಕೆ ಮಾತ್ರವಲ್ಲ ಕಲೆಗಳಿಗೂ ಕೂಡ ಅನ್ವಯವಾಗುತ್ತದೆ. ರಾಜಕೀಯ ಅಥವಾ ಮತ್ತಿತರ ಸಂಗತಿಗಳು ದೇಶವನ್ನು ವಿಭಜಿಸಬಹುದು, ಆದರೆ — ಭಾಷೆ, ಸಾಹಿತ್ಯ, ಕಲೆ ಮುಂತಾದವು ಅದನ್ನು ಒಂದುಗೂಡಿಸುತ್ತವೆ ಎಂಬ ಮಾತು ಕೂಡ ಸಂಸ್ಕೃತಿಯ ಪಾತ್ರ ಎಷ್ಟೆಂಬುದನ್ನು ಸೂಚಿಸುತ್ತದೆ.

ಭಾರತೀಯ ಸಂಸ್ಕೃತಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ವೈವಿಧ್ಯವನ್ನು ತಾಳಿದೆ.ಅದೆಷ್ಟೋ ಅನ್ಯಸಂಸ್ಕೃತಿಗಳ ಪ್ರಭಾವ ಅದರ ಮೇಲೆ ನಿರಂತರವಾಗಿ ಆಗುತ್ತಾ ಬಂದಿದ್ದರೂ ಅದಕ್ಕೆ ಧಕ್ಕೆ ಬಂದಿಲ್ಲ, ಅದರ ಶ್ರೀಮಂತಿಕೆಗೆ ಕುತ್ತು ಬಂದಿಲ್ಲ. ಕಾರಣ, ಅದರ ಬೇರುಗಳು ಅಷ್ಟೊಂದು ಆಳಕ್ಕೆ ಬಿಟ್ಟಿರುವುದು. ಆಧುನಿಕತೆ ಇಷ್ಟೊಂದು ರೀತಿಯಲ್ಲಿ ಮೆರೆದಾಡುತ್ತಿರುವುದರ ನಡುವೆಯೂ ಮೂಲ ಸಂಸ್ಕೃತಿ ತನ್ನ ಸ್ಥಾನವನ್ನು ಬಿಟ್ಟುಕೊಟ್ಟಿಲ್ಲ. ಮೇಲ್ನೋಟಕ್ಕೆ ಅಲುಗಾಡಿದಂತೆ ಭಾಸವಾದರೂ ಅದರ ಅಂತಃಸತ್ವ ಮಾತ್ರ ಹಾಗೆಯೇ ಸತ್ವಯುತವಾಗಿ ಉಳಿದಿದೆ. ಇದಕ್ಕೆ ಇಂದಿಗೂ ನಮ್ಮಲ್ಲಿ ಜೀವಂತವಾಗಿ ಉಳಿದು ಬಂದಿರುವ ಜಾನಪದವೇ ಸಾಕ್ಷಿ.

Folklore is a lively fossil which refuses to die ಎಂಬ ಸಿ.ಎಫ್. ಪಾಟರ್ ನ ಮಾತು ಇಲ್ಲಿ ಉಲ್ಲೇಖನೀಯ. ಜಾನಪದ ಒಂದು ಜೀವಂತ ಪಳೆಯುಳಿಕೆ. ಅದಕ್ಕೆ ಎಂದೂ ಸಾವಿಲ್ಲ. ಒಂದು ರೀತಿ ಅದು ಗರಿಕೆಯ ಗುಣವು ಎಲ್ಲೋ ಅದು ಒಣಗಿದಂತೆ ಕಂಡರೂ, ಮತ್ತೆಲ್ಲಿಯೋ ಚಿಗುರೊಡೆದು ತಲೆಯೆತ್ತಿ ನಿಲ್ಲುತ್ತದೆ. ಜಾನಪದ ಭಾರತೀಯ ಸಂಸ್ಕೃತಿಯ ತಳಹದಿ, ಮೂಲಬೇರು. ಅದಕ್ಕೆಂದೂ ಸಾವಿಲ್ಲ. ಭಾರತ ಹಳ್ಳಿಗಳ ದೇಶ. ಅದರ ಹೆಚ್ಚಿನ ಭಾಗ ಮೂಲ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಇಂತಹ ಕಡೆಗಳಲ್ಲಿ ಜಾನಪದ ಸಂಪತ್ತಿಗೆ ಎಂದೂ ಕೊರೆಯುಂಟಾಗದು. 'Folklore lives its fullest, purest and most natural life, away from learned culture' - ಎಂಬ ಆರ್.ಎಸ್. ಬಾಗ್ಸ್‌ನ ಅಭಿಪ್ರಾಯ ಕೂಡ ಇಲ್ಲಿ ಸ್ಮರ ಣೀಯ. ಶಿಷ್ಟ ಸಂಸ್ಕೃತಿಯಿಂದ ದೂರವಾದ ಸಮಾಜದಲ್ಲಿ ಜಾನ ಪದ ತನ್ನತನವನ್ನು ಉಳಿಸಿಕೊಂಡು ಬರಲು ಸಾಧ್ಯವಾಗಿದೆ. ಅದೇ ರೂಪದಲ್ಲಲ್ಲದಿದ್ದರೂ ಸ್ವಲ್ಪ ಭಿನ್ನವೆನಿಸಿ ತನ್ನ ಮೂಲ ಸಂಸ್ಕೃತಿಯನ್ನು ಬಿಂಬಿಸುತ್ತಾ ಬಂದಿದೆ.

ಭಾರತೀಯ ಸಂಸ್ಕೃತಿ ವೈವಿಧ್ಯ- ವೈಶಿಷ್ಟ್ಯಗಳಿಗೆ ಹೆಸರಾದದ್ದು. ವರ್ಣರಂಜಿತವಾದ ಅಲ್ಲಿಯ ಕಲಾಕುಸುಮಗಳು ಭಾರತದ ಉದ್ದಗಲಕ್ಕೂ ಹಬ್ಬಿ ಗಂಧ ಸೂಸಿವೆ. ಮನಸೂರೆಗೊಂಡಿವೆ. ಜೀವನವೇ ಒಂದು ಕಲೆ ಎಂಬ ಮಾತಿದೆ, ಅದು ಅಕ್ಷರಶಃ ಸತ್ಯ. ಬದುಕನ್ನು ಹಾಗೆ ನಡೆಸಿದಾಗ ಅದು ಕಲೆಯಾಗದೆ ಮತ್ತೇನಾಗಲು ಸಾಧ್ಯ? ಆ ಸುಂದರತೆಗೆ ಬೇಕಾದ ಎಲ್ಲ ರಾಸಾಯನಿಕಗಳನ್ನು ಬೆರೆಸಿದಾಗ ಮಾತ್ರ ಹಾಗಾಗಲು ಸಾಧ್ಯ. ಅಂತಹ ಹೊಂದಾಣಿಕೆ ಭಾರತೀಯ ಸಂಸ್ಕೃತಿಯಲ್ಲಿ ಎದ್ದು ಕಾಣುತ್ತದೆ. ಅದನ್ನು ಪರಿಣಾಮಕಾರಿಯಾಗಿ, ವರ್ಣರಂಜಿತವಾಗಿ, ವೈಶಿಷ್ಟ್ಯಪೂರ್ಣವಾಗಿ ಜಾನಪದದ ವಿವಿಧ ಪ್ರಕಾರಗಳು ಭಾರತೀಯ ಸಂಸ್ಕೃತಿಯಲ್ಲಿ ಬಿಂಬಿಸುತ್ತಾ ಬಂದಿವೆ.

ಅಧ್ಯಯನದ ದೃಷ್ಟಿಯಿಂದ ಜಾನಪದವನ್ನು ವಿದ್ವಾಂಸರು ಹಲವು ವರ್ಗಗಳಾಗಿ ವಿಭಜಿಸಿದ್ದಾರೆ. ಅಷ್ಟನ್ನೇ ವೀಕ್ಷಿಸಿದರೂ ಸಾಕು - ಜಾನಪದ ಎಷ್ಟೊಂದು ವಿಸ್ತೃತವಾದದ್ದು ಹಾಗೂ ವೈವಿಧ್ಯಪೂರ್ಣವಾದದ್ದು ಎಂದು ತಿಳಿಯಲು. ಹತ್ತು ಹಲವು ವಿಭಜನ ಕ್ರಮಗಳಲ್ಲಿ ಹೆಚ್ಚು ಮಾನ್ಯತೆ ಪಡೆದಿರುವುದು ಅತ್ಯಂತ ವಿಸ್ತೃತವೂ, ವಿವರಪೂರ್ಣವೂ ಆದದ್ದು ಆರ್.ಎಸ್.ಭಾಗ್ಸ್ ನ ವಿಭಜನಾ ಕ್ರಮ.ಅದನ್ನು ಜಾನಪದ ಚತುರ್ಮುಖಗಳೆಂದು ಕರೆಯಲಾಗಿದೆ.

೧. ಸಾಹಿತ್ಯಿಕ ಬಗೆ (ಪುರಾಣ, ಕಥೆ ಹಾಗೂ ಕಾವ್ಯಗಳು)

೨. ಭಾಷಿಕ ಬಗೆ (ಮಾತು, ಸಂಜ್ಞೆ, ಗಾದೆ, ಒಗಟು ಇತ್ಯಾದಿ)

೩. ವೈಜ್ಞಾನಿಕ ಬಗೆ (ಚಿಕಿತ್ಸೆ, ಭವಿಷ್ಯ, ಮಾಟ-ಮಂತ್ರ, ನಂಬಿಕೆ ಇತ್ಯಾದಿ)

೪. ಕ್ರಿಯಾತ್ಮಕ ಬಗೆ (ಸಂಗೀತ-ನೃತ್ಯ, ಆಟ, ಹಬ್ಬ, ಕಲೆ-ನಾಟಕ, ಅಡುಗೆ, ಕುಶಲ ಕೈಗಾರಿಕೆ ಮುಂತಾದವು).

ಜಾನಪದ ಸಾಮೂಹಿಕ ಸೃಷ್ಟಿ - ಅದು ತಲೆಮಾರಿನಿಂದ ತಲೆಮಾರಿಗೆ ಕಂಠಸ್ಥವಾಗಿ, ಕರ್ಣಾಕರ್ಣಿಯಾಗಿ ಹಾಗೂ ಅನುಕರಣೆಯ ಮೂಲಕ ಹರಿದು ಬಂದದ್ದು, ನೋಡುತ್ತ, ಕೇಳುತ್ತ, ಅನುಕರಣೆಯ ಮೂಲಕ ಸ್ಥಿತ್ಯಂತರವನ್ನೂ ಪಡೆಯುತ್ತಾ, ಸಾಗುತ್ತಾ ಬಂದಿದ್ದು, ಅದು ಅನಕ್ಷರಸ್ಥರ, ಆದರೆ ಅಜ್ಞಾನಿಗಳಲ್ಲದವರ ವಿಶಿಷ್ಟ ಕೊಡುಗೆ.

ಎಲ್ಲದಕ್ಕೂ ಜಾನಪದವೇ ಮೂಲ ಎಂಬ ವಾದವೊಂದಿದೆ. ಅದನ್ನು ಪೂರ್ಣವಾಗಿ ಅಲ್ಲಗಳೆಯುವಂತಿಲ್ಲ. ಮಣ್ಣೇ ಇಲ್ಲದೆ ಮಡಿಕೆ ಮಾಡುವುದಾದರೂ ಹೇಗೆ? ಎಂಬ ತರ್ಕದೊಂದಿಗೆ ಅದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ನಾವು ಶಿಷ್ಟ ವರ್ಗಕ್ಕೆ ಸೇರಿಸುವ - ರಾಮಾಯಣ, ಮಹಾಭಾರತ ಮಹಾಕಾವ್ಯಗಳೂ ಕೂಡ ಜಾನಪದ ಮೂಲದಿಂದ ಬಂದವುಗಳು ಎಂಬುದನ್ನು ವಿದ್ವಾಂಸರು ತಿರಸ್ಕರಿಸಿದಂತಿಲ್ಲ. Vedic Folklore ನಲ್ಲಿ ಬರುವ ಈ ಮಾತು ಇದಕ್ಕೆ ಪೂರಕವಾಗಿದೆ. ''It seems quite probable that the puranas and the great drama tist Kalidasa took their account from pre existing folklore tradition..'' ರಾಮಾಯಣ, ಮಹಾಭಾರತ ಕಥೆಗಳು ಒಂದುಕಾಲಕ್ಕೆ ಜನರ ಬಾಯಲ್ಲಿ ಹರಿದಾಡಿ ನಾನಾ ರೂಪವನ್ನು ಪಡೆದು ನಂತರ ಅದಕ್ಕೊಂದು ಸ್ಪಷ್ಟ ರೂಪ - ಹಲವು ವೈವಿಧ್ಯ ವೈಶಿಷ್ಟ್ಯಗಳೊಂದಿಗೆ ಮೂಡಿ ಬಂದಿರಲು ಸಾಧ್ಯ. ಭಾರತೀಯ ಸಾಹಿತ್ಯಕ್ಕೆ ಆ ಎರಡು ಮಹಾ ಗ್ರಂಥಗಳೇ ಮೂಲಾಧಾರವಾದರೂ, ಅವುಗಳಿಗೆ ಪ್ರೇರಣೆ ಹಾಗೂ ಮೂಲ — ಜಾನಪದ. ಈ ಮಹಾಕಾವ್ಯಗಳಲ್ಲಿ ಚಿತ್ರಿತವಾಗಿರುವ ಅದೆಷ್ಟೋ ಘಟನೆಗಳು ಒಂದೊಂದು ಭಾಗದ, ಒಂದೊಂದು ಭಾಷೆಯ ರಚನೆಯಲ್ಲಿಯೂ ವಿಭಿನ್ನವಾಗಿ ಗೋಚರ ವಾಗುವುದು ಇದಕ್ಕೆ ಸಾಕ್ಷಿ.ಜಾನಪದದ ಮುದ್ರೆ ಎಲ್ಲಾ ಶಿಷ್ಟ ಸಾಹಿತ್ಯ, ಸಂಸ್ಕೃತಿ, ಕಲೆಗಳ ಮೇಲೆಯೂ ಆಗಿದೆ ಎಂಬುದನ್ನು ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. '' The influence of Folk culture, art, music, dance, literature- is directly to be found every where in all his activities and creations.''

*(Influence of folk art on some modern artists - by Chittaranjan Das ; Published in Vol-1).*

ಭಾರತೀಯ ಸಂಸ್ಕೃತಿಯಲ್ಲಿ ಕಂಡುಬರುವ ಜಾನಪದ ವೈವಿಧ್ಯವನ್ನು ಈ ನಾಲ್ಕು ಪ್ರಧಾನ ಬಗೆಗಳಲ್ಲಿ ಗುರುತಿಸ ಬಹುದು:

**೧. ಸಾಹಿತ್ಯಿಕ ಬಗೆ :** ಈ ಗುಂಪಿನಲ್ಲಿ ಪುರಾಣ, ಐತಿಹ್ಯ, ಕಥೆ, ಕಾವ್ಯ ಪ್ರಧಾನವಾಗಿ ಸೇರ್ಪಡೆಯಾಗುತ್ತವೆ. ಜನಪದರು ಅನಕ್ಷರಸ್ಥರು ಆದರೆ ಅಜ್ಞಾನಿಗಳಲ್ಲ. ಭಾವನೆಗಳಿಲ್ಲದವರಲ್ಲ. ಸಾಹಿತ್ಯ ಮುಖ್ಯವಾಗಿ ಮನಸ್ಸಿನ ಭಾವನೆಗಳ ಅಭಿವ್ಯಕ್ತಿ. ಜೀವನದಲ್ಲಿ ಬಂದು ಹೋದ ನೋವು-ನಲಿವುಗಳು, ಕಷ್ಟ-ಸುಖ, ಕಂಡು-ಕೇಳಿದ ಘಟನೆಗಳು ಸಾಹಿತ್ಯರೂಪ ತಾಳಿದುದನ್ನು ನೋಡುತ್ತೇವೆ. ಇದು ಯಾರೊಬ್ಬರ ಸ್ವತ್ತೂ ಅಲ್ಲ, ಅದು ಪ್ರಪಂಚದ ಎಲ್ಲ ಮಾನವ ಜೀವಿಗಳಿಗೂ ಸಂಬಂಧಿಸಿದ್ದು. ಭಾರತ ಕೂಡ ಅದರಲ್ಲೊಂದು.

**ಹಲಗೆಯ ಹಿಡಿದಿಲ್ಲ ಬಳಪದ ಬರೆದಿಲ್ಲ**
**ಶ್ರೀಗುರು ನಮಗೆ ಕಲಿಸಿಲ್ಲ । ತಾಯಿಗಳಿರ ।**
**ಲೆಖ್ಖಣಿಕೆ ನಮಗೆ ಗೊತ್ತಿಲ್ಲ ॥**

ಎಂದು ವಿನಯವನ್ನು ಪ್ರದರ್ಶಿಸುತ್ತಲೇ ಅಪೂರ್ವವಾದ, ವೈಶಿಷ್ಟ್ಯಪೂರ್ಣವಾದ, ವೈವಿಧ್ಯದಿಂದ ಕೂಡಿದ ಸಾಹಿತ್ಯ ರಾಶಿಯನ್ನು ನಮ್ಮ ಜನಪದರು ಹೊರಹಾಕಿದ್ದಾರೆ. ಭಾರತದ ಉದ್ದಗಲಕ್ಕೂ ಅದರ ಶ್ರೀಮಂತಿಕೆಯನ್ನು ವೈಭವವನ್ನು ಕಾಣಬಹುದು. ಭಾರತೀಯ ಸಂಸ್ಕೃತಿ ಅದರಲ್ಲಿ ಹಾಸುಹೊಕ್ಕಾಗಿರುವುದೂ ವೇದ್ಯವಾಗುತ್ತದೆ.

ಜಾನಪದ ಭಾರತೀಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿ ಬಿಂಬಿತವಾಗಿದೆ. ಭಾರತದ ವಿವಿಧ ಭಾಷೆಗಳಲ್ಲಿ, ವಿವಿಧ ಭಾಗಗಳಲ್ಲಿ , ವಿವಿಧ ಜನಾಂಗದಲ್ಲಿ ಹೊರಹೊಮ್ಮಿರುವ ಜನಪದ ಸಂಸ್ಕೃತಿ ವಿವಿಧತೆಯಲ್ಲಿ ಏಕತೆಯನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದೆ. ಮೇಲ್ನೋಟಕ್ಕೆ ಬದಲಾಗಿ ಕಂಡರೂ ಆಂತರಿಕವಾಗಿ ಅದು ಹೊಂದಿರುವ ಸತ್ವ ಒಂದೇ ಆಗಿದೆ. ಪ್ರಾದೇಶಿಕ ಭಿನ್ನತೆ ಸಹಜವಾದದ್ದು.ಆದರೆ ಆ ಭಿನ್ನತೆಯ ಮೇಲ್ಮೈ ವೈವಿಧ್ಯಕ್ಕೆ ಕಾರಣವಾದರೆ, ಒಳಮೈ ಏಕತ್ವವನ್ನು ಸಾರುತ್ತದೆ. ಜನಪದ ಮೂಲದ ರಾಮಾಯಣ, ಮಹಾಭಾರತದ ಕಥೆಗಳನ್ನಾಗಲೀ, ಜನಪದ ಕಥೆಗಳನ್ನಾಗಲೀ, ಗೀತೆ-ಗಾದೆ-ಒಗಟು-ಲಾವಣಿ ಇತ್ಯಾದಿಗಳನ್ನಾಗಲಿ ಗಮನಿಸುವಾಗ ಅಲ್ಲಿ ಬರುವ - ರಾಮ, ಸೀತೆ, ಧರ್ಮರಾಯ, ಕೃಷ್ಣ, ದ್ರೌಪದಿ ಮುಂತಾದ ಪಾತ್ರಗಳು ಭಾರತೀಯ ಸಂಸ್ಕೃತಿಯನ್ನು ರೂಪಿಸುವಲ್ಲಿ ಹಾಗೂ ಅದನ್ನು ಸ್ಥಾಪಿಸುವಲ್ಲಿ ಕಾರಣವಾದವುಗಳು. ಅಲ್ಲಿ ಬರುವ ಸಾಮಾನ್ಯ ಜನಪದ ಕಥೆಗಳು ಕೂಡ ಭಾರತೀಯ ಸಂಸ್ಕೃತಿಯನ್ನು ಅನಾವರಣಗೊಳಿಸುವಲ್ಲಿ ಅಭಿವ್ಯಕ್ತಿಗೊಂಡವುಗಳು. ಇಲ್ಲೆಲ್ಲ ಅವುಗಳ ಸಾರ, ಸತ್ವ ಒಂದೇ ಆದರೂ ಅಭಿವ್ಯಕ್ತಿಯ ರೀತಿ ಬೇರೆ ಬೇರೆ.ಆ ಮೂಲಕ ಭಾರತೀಯ ಸಂಸ್ಕೃತಿಯಲ್ಲಿನ ವೈವಿಧ್ಯತೆ ಅನಾವರಣಗೊಳ್ಳುತ್ತದೆ. ಭಾರತೀಯ ಸಂಸ್ಕೃತಿಯ ಮೂಲ ಸತ್ವವಾದ ಶಿಷ್ಟರಕ್ಷಣ, ದುಷ್ಟಶಿಕ್ಷಣ ಎಂಬುದು, ಹಾಗೂ ಸತ್ಯಕ್ಕೇ ಜಯ ಎಂಬುದು ಎಲ್ಲ ಜನಪದ ಕಥೆಗಳ ಮೂಲಮಂತ್ರವಾಗಿ ಬಿಂಬಿತವಾಗಿರುವುದನ್ನು ಕಾಣಬಹುದು.

ಗದ್ಯಕತೆಗಳಲ್ಲಿ ಬರುವ ಐತಿಹ್ಯಗಳು ಭಾರತೀಯ ಸಂಸ್ಕೃತಿಯ ತಿರುಳನ್ನು ಒಳಗೊಂಡ ವಿಭಿನ್ನ ರೀತಿಯ ಚಿತ್ರಣಗಳೇ

ಆಗಿವೆ. ನಮ್ಮ ಪುರಾಣ ಕಥೆಗಳಲ್ಲಿ ಬರುವ, ಮಹಾಕಾವ್ಯಗಳಲ್ಲಿ ಬರುವ, ಘಟನೆಗಳ ಪಾತ್ರಗಳು, ಸನ್ನಿವೇಶಗಳು, ಚಿತ್ರ-ವಿಚಿತ್ರ ಸನ್ನಿವೇಶಗಳು, ಸ್ವಾರಸ್ಯಕರವಾದ ಚಿತ್ರಣಕ್ಕೆ ಕಾರಣವಾಗಿರುವುದನ್ನು ಭಾರತದ ಮೂಲೆ ಮೂಲೆಯಲ್ಲಿಯೂ ಕಾಣಬಹುದಾಗಿದೆ. ಇಲ್ಲಿ ಸೀತೆ ವನವಾಸದ ಸಮಯದಲ್ಲಿ ಸ್ನಾನ ಮಾಡಿದ ಜಾಗ, ತನ್ನ ಸೀರೆಯನ್ನು ಒಣಗಲು ಹಾಕಿದ ಗುರುತು, ರಾವಣ ಸೀತೆಯನ್ನು ಅಪಹರಿಸುವ ಸಂದರ್ಭದಲ್ಲಿ ನಡೆದ ಘಟನಾ ಸ್ಥಳ ಎಂತಲೋ ಅಥವಾ ಮಹಾಭಾರತದ ಕತೆಯ ಸಂದರ್ಭಕ್ಕೆ ಬಂದರೆ - ಇಲ್ಲಿ ಭೀಮ ಅಡುಗೆ ಮಾಡಲು ಒಲೆ ಹಾಕಿದ ಸ್ಥಳ, ಇದು ಭೀಮನ ಹೆಜ್ಜೆಗುರುತುಗಳು, ಇದು ಪಾಂಡವರ ಗುಹೆ, ಇತ್ಯಾದಿ... ಇತ್ಯಾದಿ... ಸ್ವಾರಸ್ಯಕರವಾದ ಐತಿಹ್ಯಗಳು, ಕಥೆ ಕಾವ್ಯಗಳು ಹುಟ್ಟಿಕೊಂಡಿರುವುದರ ಹಿಂದೆ ಈ ಎಲ್ಲಾ ಮಹಾಕಾವ್ಯ ಪರಂಪರೆಯ ಹೆಜ್ಜೆಗುರುತುಗಳು ಗೋಚರಿಸುತ್ತವೆ. ಹಾಗೂ ಭಾರತೀಯ ಸಂಸ್ಕೃತಿಯಲ್ಲಿ ಒಂದಾಗಿ ಭಾರತದ ಉದ್ದಗಲಕ್ಕೂ ಹಬ್ಬಿರುವುದನ್ನು ಸೂಚಿಸುತ್ತವೆ;

ಕೇಳಿರಿ ದಶರಥ ರಾಮರ ಚರಿತೆಯ
ಲಾಲಿಸಿ ಕೇಳಿರಿ ಜನರೆಲ್ಲ
ರಾಮರ ಕಂಡನು ಹನುಮಂತ
ಸಂಜೀವನ ತಂದನು ಹನುಮಂತ
ಬಂದಳು ಕೈಕೆ ದಶರಥನೋಲಗಕೆ
ನಿಂದಳು ಮಾತಾಡಿದಳು
ರಾಮ ರಾಮ ಎನ್ನಲಿ ಜನರೆಲ್ಲ
ಶ್ರೀರಾಮ ಎನ್ನುವುದೇ ಪಾವನವು

ಭಾಗವಂತಿಕೆ ಹಾಗೂ ತಂಬೂರಿ ಸಂಪ್ರದಾಯದವರು ಹಾಡುವ ರಾಮಾಯಣದ ಕಥೆಯಲ್ಲಿ ಹರಿದುಬರುತ್ತದೆ. ಶಿಷ್ಟ ಪ್ರಕಾರದಲ್ಲಿ ಕಾಣಬರುವ ಶಿಸ್ತು ಅಲ್ಲಿ ಇಲ್ಲವಾದರೂ, ಅವರದ್ದೇ ಆದ ರೀತಿಯಲ್ಲಿ ರಂಜಿಸುವ ವೈಶಿಷ್ಟ್ಯ ಅವರದ್ದು.

ಕರ್ನಾಟಕದ ಭಾಗದಲ್ಲಿ ಕಂಡುಬರುವ ಮಂಟೇಸ್ವಾಮಿ ಕಾವ್ಯ, ಮಾದೇಶ್ವರನ ಕಾವ್ಯ, ಎಲ್ಲಮ್ಮನ ಕಾವ್ಯಗಳಂತೆಯೇ ಭಾರತದ ಇನ್ನುಳಿದ ಭಾಗಗಳಲ್ಲಿ ಆಯಾ ಪ್ರದೇಶದ ದೇವತೆಗಳನ್ನು ಒಳಗೊಂಡ ಜನಪದ ಕಾವ್ಯಗಳು ಸೃಷ್ಟಿಗೊಂಡಿವೆ. ಇವೆಲ್ಲದರ ಹಿಂದೆ ಒಟ್ಟಾಗಿ ಅನಾವರಣಗೊಳ್ಳುವುದು ಭಾರತೀಯ ಸಂಸ್ಕೃತಿಯೇ. ಆದರೆ, ಅವುಗಳ ಆಚರಣೆ ವಿಧಾನದಲ್ಲಿ ಕಂಡುಬರುವ ವೈವಿಧ್ಯ-ವೈಶಿಷ್ಟ್ಯ ಸ್ಥಳೀಯವಾದದ್ದೇಯಾಗಿದ್ದು ಭಾರತೀಯ ಸಂಸ್ಕೃತಿಯ ಸಾರ ಅವುಗಳಲ್ಲಿ ಹೊಸ ಹೊಸ ರೂಪಗಳಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು.

### ಜನಪದ ಗೀತೆಗಳು

ನಾವು ಬಲ್ಲವರಲ್ಲ ನಾವು ತಿಳಿದವರಲ್ಲ
ತಪ್ಪುಗಳಿದ್ದರೆ ತಿದ್ದಿಕೊಳ್ಳಯ್ಯ ದೇವ!

ಎಂದು ಹಾಡುತ್ತಲೇ ವೈವಿಧ್ಯಪೂರ್ಣವಾದ ಸಾಹಿತ್ಯ ರಾಶಿಯನ್ನು ಜನಪದರು ನೀಡಿದ್ದಾರೆ. ಅವರ ವಿನಯ, ಸೌಜನ್ಯ ಗುಣಗಳೆಲ್ಲವೂ ಅವರ ಆರಂಭದ ಸಾಲುಗಳಲ್ಲಿಯೇ ಹೊರಹೊಮ್ಮಿರುವುದು ಗೋಚರಿಸುತ್ತದೆ.ಆದರೆ ಆ ವಿನಯದ ಹಿಂದೆ, ಸೌಜನ್ಯದ ಹಿಂದೆ, ಸಂಸ್ಕೃತಿಯ ಸಾರವೂ ಹುದುಗಿರುವುದು ವಿಶೇಷ.

ಆಚಾರಕ್ಕರಸಾಗು ನೀತಿಯಲ್ಲಿ ಪ್ರಭುವಾಗು ।
ಮಾತಿನಲ್ಲಿ ಚೂಡಾಮಣಿಯಾಗು । ನನಕಂದ ।
ಜ್ಯೋತಿಯೇ ಆಗು ಜಗಕೆಲ್ಲ ॥

ತಾಯಿ-ತಂದೆಯ ನಿಂದಿಸಿ ಬೈಯಿಸಿ, ಪುತ್ರಾಜಿ ಫಲ ನಿನಗಿಲ್ಲ
ಅತ್ತೆ ಮಾವದೀರ ನಿಂದಿಸಿ ಬೈಯಿಸಿ, ಈ ಲೋಕದ ಫಲ ನಿನಗಿಲ್ಲ॥

ಹಸುವಿಗುಲ್ಲನಾಕಿ ಸಿಶುವಿಗ್ವಾಲನಾಕಿ,
ಮುಂದಾರು ಫಲ ದೊರಕ್ಯಾವು
ಹಾಲು ದಾನವ ಮಾಡೆ, ಅನ್ನ ದಾನವ ಮಾಡೆ,
ಮ್ಯಾಲೇಳು ಫಲ ದೊರಕ್ಯಾವು ॥

ಇಲ್ಲೆಲ್ಲ ವ್ಯಕ್ತವಾಗುವುದು ಭಾರತೀಯ ಸಂಸ್ಕೃತಿಯ ಸಾರವೇ. ಏನನ್ನು ಮಾಡಬೇಕು, ಏನನ್ನು ಮಾಡಬಾರದು,



ಏನನ್ನು ಮಾಡಿದರೆ ಏನಾಗುತ್ತದೆ - ಅಷ್ಟೇ ಅಲ್ಲ, ಅದಕ್ಕೆ ಪರಿಹಾರವೂ ಇದೆ ಎಂಬುದನ್ನು ಅದು ಸೂಚಿಸುತ್ತದೆ. ತಪ್ಪು ಮಾಡಿದವರನ್ನು ಶಿಕ್ಷಿಸುವುದು ದೊಡ್ಡದಲ್ಲ, ತಪ್ಪನ್ನು ತಿದ್ದಿಕೊಂಡು ಮೇಲೇರಿ ಪರಿವರ್ತನೆ ಹೊಂದಿ ಬರುವಂತೆ ಮಾಡುವುದೇ ದೊಡ್ಡ ಕೆಲಸ. ಭಾರತೀಯ ಸಂಸ್ಕೃತಿಯಲ್ಲಿನ ಉದಾರತೆಗೆ ಇಂತಹ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ.

ತಾಯಿಯ ನೆನೆದಾರೆ ತಂಗೂಳು ಬಿಸಿಯಾಯ್ತು ।
ತಂದೆಯ ನೆನೆದಾರೆ ಮಾಸೀದ ತಲೆಯು ಮಡಿಯಾಯ್ತು ॥

ಎಂಬ ಒಬ್ಬ ಹೆಣ್ಣುಮಗಳ ಮನಸ್ಸಿನ ಭಾವನೆಗಳ ಅಭಿವ್ಯಕ್ತಿ ತಂದೆ-ತಾಯಿಯ ಬಗ್ಗೆ ಒಬ್ಬ ಹೆಣ್ಣುಮಗಳಿಗೆ ಇರುವ ಪ್ರೀತಿ, ವಾತ್ಸಲ್ಯ, ಭಕ್ತಿ, ಗೌರವ ಮುಂತಾದ ಅಂತಃಕರಣಪೂರ್ವಕವಾದ ಭಾವನೆಗಳಿಗೆ ಸಾಕ್ಷಿಯಾಗುತ್ತದೆ.

**ಕಾಶಿಗೆ ಹೋಗಲಿಕ ಏಸೊಂದು ದಿನ ಬೇಕ**
**ತಾಸ್ಹೊತ್ತಿನಾ ದಾರಿ ತವರೂರು । ಮನೆಯಾಗ ।**
**ಕೂತವಳೆ ಕಾಶಿ ಹಡೆದವ್ವ ॥**

ಜನಪದ ಗೀತೆಗಳಲ್ಲಿ ಅಭಿವ್ಯಕ್ತಿಗೊಂಡಿರುವ ಇಂತಹ ಅಪೂರ್ವ ರೀತಿಯ ಸಂಸ್ಕೃತಿಯ ತಿರುಳು ಭಾರತದ ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾದದ್ದಲ್ಲ. ಅದು ಭಾರತೀಯ ಹೆಣ್ಣಿನ ಭಾವನೆಯೇ ಎನ್ನಬಹುದು. ಅದರಲ್ಲಿ ಅವರ ಭಕ್ತಿಭಾವ, ವೈಚಾರಿಕತೆ, ತರ್ಕ — ಎಲ್ಲವೂ ಗೋಚರಿಸುತ್ತದೆ.

### ಜನಪದ ಕಥೆಗಳು

ಒಂದು ಕಾಲಕ್ಕೆ 'ಅಡುಗೂಲಜ್ಜಿ ಕಥೆ' ಎಂದು ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಜನಪದ ಕಥೆಗಳು ಕೇವಲ ಕಾಲಹರಣದ ಅಥವಾ ಮಕ್ಕಳನ್ನು ರಂಜಿಸಲು ಹುಟ್ಟಿಕೊಂಡವು ಎಂದು ಭಾವಿಸಲಾಗಿತ್ತು. ಆದರೆ ಇಂದು ಮಾನವನ ಗತಕಾಲದ ಒಂದೊಂದು ಅಂಶವೂ ಅವುಗಳ ಮೂಲಕ ಅಧ್ಯಯನಕ್ಕೆ ಒಳಪಟ್ಟಿವೆ.

ಜನಪದ ಕಥೆಗಳು ಜನಪದ ಸಾಹಿತ್ಯದ ಪ್ರಾಚೀನವೂ, ಪ್ರಚಲಿತವೂ ಆದ ಒಂದು ವಿಶಿಷ್ಟ ಪ್ರಕಾರವೆನಿಸಿ, ಪ್ರಾಚೀನ ಮಾನವನ — ಬದುಕು, ಬಯಕೆ, ಆಸೆ, ನಿರಾಶೆ, ಆಕಾಂಕ್ಷೆ, ನಂಬಿಕೆ, ಆಚರಣೆ, ದ್ವೇಷ, ಅಸೂಯೆ, ಪ್ರೀತಿ, ಪ್ರೇಮ, ಕಾಮ, ಕನಸು, ಕಲ್ಪನೆ — ಬದುಕಿನ ಈ ಎಲ್ಲ ಆಗುಹೋಗುಗಳಿಗೆ ಸಾಕ್ಷಿಯಾಗುವ ಹಿನ್ನೆಲೆಯಲ್ಲಿ ಒಂದು ಬೃಹತ್ತಾದ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ನೆರವಾಗಿವೆ. ಅವು ಕೇವಲ ಕಾಲಹರಣಕ್ಕಾಗಿ ಹುಟ್ಟಿಕೊಂಡವುಗಳಲ್ಲ, ಆ ಹಿನ್ನೆಲೆಯಲ್ಲಿ ಒಂದು ಸಾಮಾಜಿಕ ಬದುಕಿನ ಆಗುಹೋಗುಗಳ ಅಭಿವ್ಯಕ್ತಿಯ ಜೊತೆ ಜೊತೆಯಲ್ಲಿಯೇ ಸಾಂಸ್ಕೃತಿಕವಾದ ಅಂಶಗಳನ್ನು ಪ್ರತಿಪಾದಿಸುವುದಾಗಿದೆ. ಅಲ್ಲಿ ಬರುವ ವಿವಿಧ ಪ್ರಕಾರದ ಕಥೆಗಳು ಜನಪದರ ಭಾವನೆಗಳ ಅಭಿವ್ಯಕ್ತಿ ಎಂದಾಗ ಅವರ ಮನಸ್ಸಿನ ಕನಸು-ಕನವರಿಕೆಗಳು, ಕಲ್ಪನೆಗಳು ಗರಿಗೆದರಿ ಕಥಾರೂಪವನ್ನು ತಾಳಿರುವುದು ಒಂದು ಬಗೆಯಾದರೆ, ಮತ್ತೊಂದು — ದೇವರು, ಧರ್ಮ, ಅಧರ್ಮ, ಹಿಂಸೆ, ಅಹಿಂಸೆ ಇವುಗಳ ಹಿನ್ನೆಲೆಯಲ್ಲಿ ಅವತರಿಸಿದ ಕಥೆಗಳು ಸಂಸ್ಕೃತಿಯನ್ನು ಉಳಿಸುವ ಮತ್ತು ಆ ಬಗ್ಗೆ ಎಚ್ಚರಿಸುವ ಸೂಚನೆಯನ್ನು ನೀಡುತ್ತವೆ. ಇಲ್ಲಿ ಬರುವ ಮಾನುಷ, ಅತಿಮಾನುಷ ಕಥೆಗಳಾಗಲಿ, ಪ್ರಾಣಿಕಥೆಗಳಾಗಲಿ ಅಥವಾ ಇನ್ಯಾವುದೇ ಕಥಾಪ್ರಕಾರಗಳಲ್ಲಾಗಲಿ ನಾವು ಕಾಣುವುದು - ಒಳಿತು, ಕೆಟ್ಟದ್ದರ ಪರಿಣಾಮಗಳೇನು? ಎಂಬುದು, ಆ ಮೂಲಕ ಸಾಂಸ್ಕೃತಿಕ ಬದುಕನ್ನು ಕಟ್ಟುವುದು.

ವೇಲ್ಯಾಂನ್ ಹ್ಯಾಂಡ್ - ಜನಪದ ಕಥೆಗಳ ಬಗ್ಗೆ ಹೇಳಿರುವ ಈ ಮಾತನ್ನು ಗಮನಿಸಿದರೆ ಅವುಗಳ ಮಹತ್ವ ಅರ್ಥವಾಗುತ್ತದೆ. ಪ್ರಾಚೀನ ಮಾನವನ ಆಧ್ಯಾತ್ಮಿಕ ಹಾಗೂ ಭೌತಿಕ ಜೀವನವನ್ನು ಪುನರ್‌ರಚಿಸುವ ಏಕೈಕ ಸಾಧನವಾಗಿಯೂ ಕಥೆಗಳು ನಿಲ್ಲುತ್ತವೆ. ಎಂಬ ಮಾತು ಹಾಗೇ ಮಾನವ ಶಾಸ್ತ್ರದ ಅರಿವಿಲ್ಲದೆ ಜನಪದ ಕಥೆಗಳನ್ನು ಅರ್ಥೈಸುವುದು ಕಷ್ಟವಾಗುತ್ತದೆ — ಎಂಬ ಫ್ರಾನ್ಸ್ ಬೋಯಾಸ್ ನ ಮಾತುಗಳು ಗಮನೀಯ.

### ಭಾಷಿಕ ಬಗೆ

ಭಾಷಿಕ ಬಗೆ ಎನ್ನುವಾಗ ಅದರಲ್ಲಿ - ಗಾದೆ, ಒಗಟು, ಮಾತು, ಸಂಜ್ಞೆ ಮುಂತಾದವುಗಳೆಲ್ಲವೂ ಸೇರ್ಪಡೆಗೊಳ್ಳುತ್ತವೆ. ಭಾಷೆಯ ಸೊಗಡು ಹಾಗೂ ಸೊಬಗು ಕೂಡ ಇವುಗಳಲ್ಲಿ ಮೆರೆದಾಡುವುದನ್ನು ಕಾಣಬಹುದು. ಜನಪದರ ಭಾಷಾಶಕ್ತಿ, ಚಮತ್ಕಾರ, ಅದರ ಪ್ರಖರತೆ ಎಲ್ಲವೂ ಈ ಪ್ರಕಾರಗಳಲ್ಲಿ ಇಡಿಕಿರಿದು ತುಂಬಿವೆ. ಈ ಪ್ರಕಾರಗಳಿಲ್ಲದ ಭಾಷೆಯಿಲ್ಲ, ದೇಶವಿಲ್ಲ ಎಂಬ ಮಾತೇ ಇದೆ.

ಗಾದೆ ಮತ್ತು ಒಗಟು ಒಂದು ಭಾಷೆಯ ಹಾಗೂ ಸಂಸ್ಕೃತಿಯ ಪ್ರತಿಭಾ ಸಾರವನ್ನು ಬಿಂಬಿಸುವಂತಹದ್ದು. 'ಗಾದೆ ವೇದಕ್ಕೆ ಸಮ' ಎಂಬ ಮಾತಿದೆ. ಹಾಗೆಯೇ, 'ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ' ಎಂಬ ಮಾತು ಕೂಡ ಗಾದೆಗಳ ಮಹತ್ವವನ್ನು, ಅದರಲ್ಲಿನ ಸತ್ಯಾಂಶಗಳನ್ನು ಅರಿವಿಗೆ ತರುತ್ತವೆ. 'ಗಾದೆಯ ಒಂದು ತುದಿ ಸಾಹಿತ್ಯವಾದರೆ ಮತ್ತೊಂದು ತುದಿ ಸಂಸ್ಕೃತಿ' ಎಂಬ ಮಾತಿನ ಹಿನ್ನೆಲೆಯಲ್ಲಿಯೂ ಅದರ ಮಹತ್ವವನ್ನು ತಿಳಿಯಬಹುದು. ಗಾದೆ ಬದುಕಿನ ಎಲ್ಲಾ ಮಗ್ಗುಲುಗಳನ್ನು, ಮಾನವ ಸ್ವಭಾವದ ವಲಯಗಳನ್ನು ಗರ್ಭೀಕರಿಸಿಕೊಂಡು ಅಭಿವ್ಯಕ್ತಿಗೊಂಡದ್ದು -

- **ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗುತ್ತೆ.**
- **ಮಾಡಿದ್ದುಣ್ಣೋ ಮಹಾರಾಯ.**
- **ತಾನೂ ತಿನ್ನ ಪರರಿಗೂ ಕೊಡ.**
- **ಅನ್ನ ಹಾಕಿದ ಮನೆ ಕೆಡಲ್ಲ, ಗೊಬ್ಬರ ಹಾಕಿದ ಹೊಲ ಕೆಡಲ್ಲ.**
- **ತಾಳಿದವನು ಬಾಳಿಯಾನು.**
- **ಕುಳಿತು ಮಲಗಬೇಕು.**

ಇಂತಹ ಲೆಕ್ಕವಿಲ್ಲದಷ್ಟು ಗಾದೆಗಳು ಒಂದು ಸಾಂಸ್ಕೃತಿಕ ವಲಯದಿಂದ ರೂಪಿತವಾದವು. ಅವರ ಬದುಕು ಹಾಗೂ ಅದರ ಇರುವಿಕೆಯ ಬಗೆಗೆ ಆಸಕ್ತಿ ತೋರಿದವುಗಳು.ಇಂತಹ ನುಡಿಗಟ್ಟುಗಳು 'ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು' ಎಂಬಂತೆ ಚುಟುಕಾಗಿ, ಚುರುಕಾಗಿ ವಿಷಯ ಮುಟ್ಟಿಸುವ ಕೆಲಸ ಮಾಡುತ್ತವೆ.

ಇದೇ ಪ್ರಕಾರದಲ್ಲಿ ಸೇರಿಸಬಹುದಾದ್ದು - ಒಗಟು.ಇದು ಚಮತ್ಕಾರ ಪ್ರಧಾನವಾದದ್ದು. ಜನಪದರ ಅಸಾಧಾರಣ ಪ್ರತಿಭೆ, ಅವಲೋಕ ದೃಷ್ಟಿ, ಭಾಷಾಸಾಮರ್ಥ್ಯ ಎಲ್ಲವೂ ಇದರಲ್ಲಿ ಗೋಚರಿಸುತ್ತವೆ. ಒಂದು ವಿಷಯವನ್ನು ಮತ್ತೊಂದು ರೂಪದಲ್ಲಿ ಅಡಗಿಸಿಟ್ಟು ಪ್ರಶ್ನೆಯ ರೀತಿಯಲ್ಲಿ ಮತ್ತೊಬ್ಬರಿಗೆ ಒಡ್ಡು

ವುದು. ಒಬ್ಬರು ಮತ್ತೊಬ್ಬರ ಬುದ್ಧಿಶಕ್ತಿಯನ್ನು ಅಳೆಯುವ ಪಂದ್ಯವೂ ಇದೆನ್ನಿಸಬಹುದು.ಗಾದೆ ಅನುಭವದ ಜನ್ಯವಾದರೆ, ಒಗಟು ಬುದ್ಧಿಜನ್ಯ. ಇದೊಂದು ಬೌದ್ಧಿಕ ಕ್ರೀಡೆ.

ಒಗಟು – ಭಾರತೀಯ ನೆಲೆಯಲ್ಲಷ್ಟೇ ಅಲ್ಲ ಜಗತ್ತಿನಾದ್ಯಂತ ಅಲ್ಲಿಯ ಸಂಸ್ಕೃತಿಯ ಒಂದು ಭಾಗವಾಗಿಯೇ ಬೆಳೆದು ಬಂದಿದೆ. ನಾನಾ ದೇಶಗಳಲ್ಲಿ, ನಾನಾ ರೀತಿಯಲ್ಲಿ ಒಗಟನ್ನು ಬಳಸುತ್ತಾ ಬಂದಿದ್ದಾರೆ. ಧಾರ್ಮಿಕ ಕಾರ್ಯಗಳಲ್ಲಿ, ಭವಿಷ್ಯವನ್ನು ತಿಳಿಯಲು, ಪಾಂಡಿತ್ಯ ಪ್ರತಿಭೆಯ ಪ್ರದರ್ಶನವಾಗಿ, ಹಣಗಳಿಕೆಯ ಸಾಧನವಾಗಿ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಒಗಟು ಪ್ರಧಾನ ಪಾತ್ರ ವಹಿಸುತ್ತಾ ಬಂದಿರುವುದುಂಟು. ಶ್ರಾದ್ಧ ಮುಂತಾದ ಸಂದರ್ಭಗಳಲ್ಲಿ ಬ್ರಾಹ್ಮಣರಿಗೆ ಊಟ ಬಡಿಸುವಾಗ ಒಗಟುಗಳನ್ನು ಒಡ್ಡಬೇಕೆಂಬ ನಿಯಮವಿತ್ತೆಂದು ಹೇಳಲಾಗಿದೆ. ಇದರಿಂದ ಪಿತೃಗಳಿಗೆ ನೆಮ್ಮದಿ ಉಂಟಾಗುತ್ತದೆಂಬ ನಂಬಿಕೆ. ಮುಂದಿನ ಬೆಳೆ ಹೇಗಿರುತ್ತದೆಂಬುದನ್ನು ತಿಳಿಯಲು ಒಗಟನ್ನು ಬಿಡಿಸುವುದರ ಮೂಲಕ ತಿಳಿಯಲಾಗುತ್ತಿತ್ತಂತೆ. ಒಗಟನ್ನು ಸುಲಭವಾಗಿ ಬಿಡಿಸಿದರೆ ಆ ವರ್ಷದ ಬೆಳೆ ಚೆನ್ನಾಗಿ ಆಗುತ್ತದೆ ಎಂಬ ನಂಬಿಕೆ.

ಭಾರತದಲ್ಲಿ ಯಜ್ಞಯಾಗಾದಿಗಳ ಸಂದರ್ಭದಲ್ಲಿ ಒಗಟುಗಳ ಬಳಕೆಯ ಸಂಪ್ರದಾಯವಿತ್ತೆಂದು ತಿಳಿಯುತ್ತದೆ.

**ಪ್ರಶ್ನೆ : ಏಕಾಂಗಿಯಾಗಿ ಸಂಚರಿಸುವವನು ಯಾರು?**
**ಯಾರು ಮರಳಿ ಹುಟ್ಟುತ್ತಾನೆ?**
**ನೆಗಡಿಗೆ ಸಿದ್ಧೌಷಧ ಯಾವುದು?**
**ಮಹಾರಾಶಿ ಯಾವುದು?**

**ಉತ್ತರ : ಏಕಾಂಗಿಯಾಗಿ ಸಂಚರಿಸುವವನು – ಸೂರ್ಯ.**
**ಮರಳಿ ಹುಟ್ಟುವವನು – ಚಂದ್ರ.**
**ನೆಗಡಿಗೆ ಸಿದ್ಧೌಷಧ – ಬೆಂಕಿ.**
**ದೊಡ್ಡ ರಾಶಿ – ಭೂಮಿ.**

ಧಾರ್ಮಿಕ ಕಾರ್ಯಗಳಲ್ಲಿ, ಸಾಂಪ್ರದಾಯಿಕವಾದ ಆಚರಣೆಗಳಲ್ಲಿ ಭಾರತದಲ್ಲಿ ಮಾತ್ರವಲ್ಲ ವಿಶ್ವದ ಅನೇಕ ಭಾಗಗಳಲ್ಲಿ ಒಗಟುಗಳು ಬಳಕೆಯಾಗುತ್ತಿದ್ದುದು ಗಮನಾರ್ಹ.

### ಮಾತು-ಸಂಜ್ಞೆ

ಜನಪದ ಭಾಷೆಯೇ ಜನಪದ ಸೊಗಡಿನಿಂದ ಕೂಡಿದ್ದು. ಆಯಾ ಪ್ರಾದೇಶಿಕ ಹಿನ್ನೆಲೆಯಲ್ಲಿ ಆಯಾ ಭಾಷೆಗಳು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುತ್ತವೆ. ಸೊಬಗನ್ನು, ಸೊಗಡನ್ನು ಮೈದುಂಬಿಕೊಂಡಿರುತ್ತವೆ. ಕನ್ನಡ ಭಾಷೆಯೊಂದನ್ನೇ ತೆಗೆದುಕೊಂಡರೂ ಪ್ರಾದೇಶಿಕವಾಗಿ ಅದು ಹೊಂದಿರುವ ಭಿನ್ನತೆ ಅಪೂರ್ವವಾದದ್ದು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಮಂಗಳೂರು, ಚಾಮರಾಜನಗರ, ಕೊಡಗು —— ಹೀಗೆ ಈ ಭಾಗಗಳ ಭಾಷಾ ವೈಖರಿಯನ್ನು ಗಮನಿಸಿದಾಗ ಅವುಗಳ ವೈಶಿಷ್ಟ್ಯ ಅರಿವಿಗೆ ಬರುತ್ತದೆ.

ಸಂಜ್ಞೆ ಕೂಡ ಭಾವನೆಗಳ, ವಿಚಾರಗಳ ಮತ್ತೊಂದು ಅಭಿವ್ಯಕ್ತಿ ರೂಪ. ಇದು ಕೂಡ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗೊಂಡಿರುವುದು ಗೋಚರಿಸುತ್ತದೆ. ಒಗಟಿನಂತೆ ಇದೂ ಕೂಡ ಕೆಲವೊಂದು ವ್ಯವಹಾರಗಳಿಗೆ,ಕೆಲವೊಂದು ಸಂದರ್ಭಗಳಲ್ಲಿ ಬಳಕೆಯಾಗುವಂತಹುದು.

ಭಾಷಿಕ ಬಗೆಯಲ್ಲಿ ಕಂಡುಬರುವ ಈ ಎಲ್ಲಾ ಅಭಿವ್ಯಕ್ತಿ ರೂಪಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ತೋರಿದರೂ ಒಂದು ಬೃಹತ್ ಸಾಂಸ್ಕೃತಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ಹೆಚ್ಚು ವ್ಯತ್ಯಾಸವನ್ನೇನು ಅವು ಹೊಂದಿದಂತೆ ತೋರುವುದಿಲ್ಲ.

### ವೈಜ್ಞಾನಿಕ ಬಗೆ

ಜಾನಪದದ ಅಧ್ಯಯನ ದೃಷ್ಟಿಯಿಂದ – ಮಾಟ, ಮಂತ್ರ, ಚಿಕಿತ್ಸೆ, ನಂಬಿಕೆ ಮುಂತಾದವನ್ನು ವೈಜ್ಞಾನಿಕ ಬಗೆಯ ಗುಂಪಿನಲ್ಲಿ ಸೇರಿಸಲಾಗಿದೆ. 'ವೈಜ್ಞಾನಿಕ ಬಗೆ' ಎನ್ನುವಾಗಲೇ ಒಂದು ಬಗೆಯ ತಾಂತ್ರಿಕ ಅಂಶ ಅದರಲ್ಲಿ ಅಡಗಿರುವುದು ಗೋಚರಿಸುತ್ತದೆ. ಈ ಗುಂಪಿನಲ್ಲಿ ಬರುವ ಇವೆಲ್ಲವೂ ಯಾವುದೇ ಸಂಸ್ಕೃತಿಯಲ್ಲಿ ಅಲ್ಲಿಯ ಒಂದು ಧರ್ಮದಷ್ಟು ಪ್ರಾಚೀನ ಹಾಗೂ ಪ್ರಚಲಿತ. ಫ್ರೇಸರ್ ಎಂಬ ಮಾನವಶಾಸ್ತ್ರಜ್ಞ ಮಾಟ, ಮಂತ್ರ ಮುಂತಾದವನ್ನು – 'ಪ್ರಾಚೀನ ವಿಜ್ಞಾನ' ಎಂದು ಕರೆದಿದ್ದಾನೆ. ಇವುಗಳಿಲ್ಲದ ದೇಶವಿಲ್ಲ, ಸಂಸ್ಕೃತಿ ಇಲ್ಲ ಎನ್ನುವಷ್ಟು ಅದು ವ್ಯಾಪಕವಾಗಿ ಕಂಡುಬರುತ್ತದೆ.ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿಯಂತೂ ಇವುಗಳ ಪ್ರಾಧಾನ್ಯತೆ ಹೆಚ್ಚಿನದು.

ಮಾಟ-ಮಂತ್ರ ಮುಂತಾದವುಗಳಿಗೆಲ್ಲಾ ನಂಬಿಕೆಯೇ ಮೂಲ. ಹಾಗಾಗಿ ಈ ಮೂರಕ್ಕೂ ಇರುವ ಸಂಬಂಧ ನಿಕಟವಾದದ್ದು. ಒಂದರ ಹೊರತು ಮತ್ತೊಂದಿಲ್ಲ ಎಂಬಂತೆ ಅವುಗಳ ಸಂಬಂಧ ಗೋಚರಿಸುತ್ತದೆ. ಭಾರತದ ಯಾವುದೇ ಮೂಲೆಗೆ ಹೋದರೂ, ಅಲ್ಲಿಯ ಸಂಸ್ಕೃತಿಯಲ್ಲಿ ಅವುಗಳನ್ನು ಗುರುತಿಸಲು ಸಾಧ್ಯ.ಏಕೆಂದರೆ ಸಂಸ್ಕೃತಿಯ ಒಂದು ಭಾಗ ಎಂಬಂತೆಯೇ ಅವು ಬೆಳೆದು ಉಳಿದು ಬಂದಿವೆ. ಅದರಲ್ಲಿ ಅವರ ಚಿಂತನೆ, ಆಲೋಚನೆ, ತರ್ಕ, ನಂಬಿಕೆ, ಸಂಪ್ರದಾಯ, ಆಶಯ, ಆಕಾಂಕ್ಷೆ ಎಲ್ಲವೂ ಹಾಸುಹೊಕ್ಕಾಗಿವೆ.

ಭವಿಷ್ಯ ಹೇಳುವುದು, ಕಣಿ ಕೇಳುವುದು – ಇವು ಕೂಡ ಸಂಸ್ಕೃತಿಯ ಪರಿಧಿಯಿಂದ ಹೊರತಾದವುಗಳಲ್ಲ. ಪ್ರಾಚೀನ ಸಂಸ್ಕೃತಿಯಲ್ಲಿ ಬೇರುಬಿಟ್ಟ ಈ ಪದ್ಧತಿಗಳು ಇಂದಿಗೂ ಮರೆಯಾಗಿಲ್ಲ. ಹಾದಿಬೀದಿಗಳಲ್ಲಿ ಭವಿಷ್ಯ-ಕಣಿ ಹೇಳುವವರ ಸಂಖ್ಯೆ ಅಂತಿರಲಿ, ಬೆಳಗ್ಗೆ ದೂರದರ್ಶನದಲ್ಲಿ ಮೊದಲ ದರ್ಶನವಾಗುವುದೇ ಭವಿಷ್ಯ ಹೇಳುವವರದ್ದು. ಭವಿಷ್ಯ ಕೂಡ ನಂಬಿಕೆಯನ್ನೇ ಮೂಲಾಧಾರವಾಗಿಸಿಕೊಂಡದ್ದು. ವೈಜ್ಞಾನಿಕ ಬಗೆಯಲ್ಲಿ ಬರುವ ಈ ಎಲ್ಲಾ ಪ್ರಕಾರಗಳು ಮಾನವನ ಮೂಲ ಅನಿಸಿಕೆಗಳ ಫಲವಾಗಿ ಅವತರಿಸಿ ಒಟ್ಟಾರೆ ಸಂಸ್ಕೃತಿಯ ಒಂದು ಭಾಗವಾಗಿ

ಉಳಿದುಬಂದಿವೆ. ಜನಪದ ಸಂಸ್ಕೃತಿಯ ತಳಹದಿಯಂತೆ ಭಾವಿಸಿದರು, ಶಿಷ್ಟ ಸಂಸ್ಕೃತಿಯಲ್ಲಿಯೂ ಅಷ್ಟೇ ಪ್ರಖರವಾಗಿ ಕಾಣಿಸಿಕೊಳ್ಳುತ್ತಿರುವುದು ಅವುಗಳ ಪ್ರಾಬಲ್ಯಕ್ಕೆ ಸಾಕ್ಷಿ. ಅವುಗಳನ್ನು ಕಡೆಗಣಿಸಿ ಜನಪದ ಸಂಸ್ಕೃತಿಯನ್ನಾಗಲಿ, ಶಿಷ್ಟಸಂಸ್ಕೃತಿಯನ್ನಾಗಲಿ ಅಳೆದು ನೋಡಲು ಸಾಧ್ಯವೇ ಇಲ್ಲ.

ಚಿಕಿತ್ಸೆಗೆ ಸಂಬಂಧಿಸಿದ ಜನಪದ ವೈದ್ಯ ವಿಶ್ವವ್ಯಾಪಿಯಾದದ್ದು. ಮಾನವ ಜಗತ್ತಿನಲ್ಲಿ ರೋಗರುಜಿನಗಳು ತಲೆಯೆತ್ತಿದಾಗಲೇ ಜನಪದ ವೈದ್ಯವೂ ತಲೆಯೆತ್ತಿದ್ದು, ಅದು ಸಂಸ್ಕೃತಿಯ ಒಂದು ಭಾಗವೂ ಆಗಿ ಬೆಳೆದು ಬಂತೆಂಬುದು ವಿಶೇಷ. ಕೆಲವೊಂದು ಖಾಯಿಲೆಗಳನ್ನು ಔಷಧದಿಂದ ಗುಣಪಡಿಸುತ್ತಿದ್ದಂತೆಯೇ – ಮಾಟ, ಮಂತ್ರದಿಂದಲೂ ಗುಣಪಡಿಸುವ ಚಿಕಿತ್ಸೆ ಜನಪದರದ್ದು. ಕಾಲಿನ ಉಳುಕನ್ನು ಮಂತ್ರ ವಿದ್ಯೆಯಿಂದ ಗುಣಪಡಿಸುವ ಪದ್ಧತಿ ಎಲ್ಲೆಡೆ ಇಂದಿಗೂ ಇದೆ.

### ಕ್ರಿಯಾತ್ಮಕ ಬಗೆ

ಭಾರತೀಯ ಸಂಸ್ಕೃತಿಯಲ್ಲಿ ಜಾನಪದ ವೈವಿಧ್ಯ ಕ್ರಿಯಾತ್ಮಕ ಬಗೆಯಲ್ಲಿ ಅತಿ ಹೆಚ್ಚಿನ ರೀತಿಯಲ್ಲಿ ವ್ಯಕ್ತವಾಗಿದೆ. ಈ ಗುಂಪಿನಲ್ಲಿ ಕಂಡುಬರುವ ಕುಣಿತ, ನಾಟಕ, ಸಂಗೀತ, ಆಟಗಳು, ಅಡುಗೆ, ಹಬ್ಬಗಳು, ಕುಶಲ ಕಲೆಗಳು ಇತ್ಯಾದಿ... ಜನಪದರ ವೈಶಿಷ್ಟ್ಯ ವೈವಿಧ್ಯಗಳನ್ನು ಅಪೂರ್ವ ರೀತಿಯಲ್ಲಿ ಪ್ರಕಟಿಸಿವೆ. ಸಂಸ್ಕೃತಿಗೂ ಮಾನವನಿಗೂ, ಮಾನವ ಬದುಕಿಗೂ ಸಂಸ್ಕೃತಿಗೂ ಇರುವ ನಿಕಟ ಸಂಬಂಧವನ್ನು ಅದು ಬಯಲುಗೊಳಿಸುತ್ತದೆ.

ಹಬ್ಬ, ಕುಣಿತ, ನಾಟಕ, ಸಂಗೀತ ಇವುಗಳಿಲ್ಲದೆ ಧರ್ಮವಾಗಲಿ ಸಂಸ್ಕೃತಿಯಾಗಲೀ ಇರಲು ಸಾಧ್ಯವಿಲ್ಲ. ಒಂದು ಬದುಕಿನ ಜೊತೆಜೊತೆಯಲ್ಲಿಯೇ ಇವುಗಳ ಹುಟ್ಟು ಕೂಡ. ಇವೆಲ್ಲವೂ ಒಂದಕ್ಕೊಂದು ಪೂರಕವಾದವುಗಳು. ಹಬ್ಬಕ್ಕೂ ಧರ್ಮಕ್ಕೂ ಇರುವ ಸಂಬಂಧ, ಇವೆರಡಕ್ಕೂ ಕುಣಿತಕ್ಕೂ ಹಾಗೂ ಸಂಗೀತಕ್ಕೂ ಇರುವ ಸಂಬಂಧ ಅವಿಭಾಜ್ಯವಾದದ್ದು. ಹಾಗೆಯೇ ಆಟಗಳು ಕುಶಲ ಕಲೆಗಳು ಕೂಡ ಇವೆಲ್ಲದರ ಹಿಂದೆ ಸಂಸ್ಕೃತಿಯೊಂದರ ಮುದ್ರೆ ಇದ್ದೇ ಇರುತ್ತದೆ. ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ಪರಿಶೀಲಿಸುವಾಗ ಭಾರತದ ಒಂದೊಂದು ಭಾಗದ ಸಂಸ್ಕೃತಿಯ ಛಾಯೆ ಅದರಲ್ಲಿ ಬಿಂಬಿತವಾಗುತ್ತದೆ.

ಯಾವುದೇ ಕಲೆ ಯಾವುದೇ ಒಂದು ಪ್ರದೇಶಕ್ಕೆ ಸೀಮಿತವೆಂದು ಭಾವಿಸುವುದು ತಪ್ಪಾಗುತ್ತದೆ. ಒಂದು ವ್ಯಾಪಕವಾದ ಭೌಗೋಳಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಅದು ವಿಸ್ತೃತವಾಗಿ ಗೋಚರಿಸುವಂತೆಯೇ ಆಂತರಿಕವಾದ ಸಂಬಂಧವನ್ನು ಉಳಿಸಿಕೊಂಡೇ ಬಾಹ್ಯರೂಪದ ಹಲವು ವ್ಯತ್ಯಾಸಗಳನ್ನು ಅದು ಬಿತ್ತರಿಸುತ್ತದೆ. ಜನಪದ ಚಿತ್ರಕಲೆಯನ್ನು ಹಾಗೂ ಅದಕ್ಕೆ ಬಳಕೆಯಾಗುವ ವಸ್ತುಗಳನ್ನು, ಅವುಗಳು ಪಡೆದುಕೊಂಡಿರುವ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಪರಿಶೀಲಿಸುವಾಗ ಕರ್ನಾಟಕವಾಗಲಿ ಅಥವಾ ಭಾರತದ ಬೇರಾವ ಪ್ರದೇಶವಾಗಲಿ ಇದಕ್ಕಿಂತ ಭಿನ್ನವಾಗಿ ಅನಿಸುವುದಿಲ್ಲ. ಏಕೆಂದರೆ ಇವೆಲ್ಲವೂ ಸಾಂಸ್ಕೃತಿಕವಾಗಿ ಹಾಗೂ ಭೌಗೋಳಿಕವಾಗಿ ಹೆಚ್ಚು ಅಂತರವಿಲ್ಲದೆ ಇದ್ದ ಸಮಾನ ಭಾವನೆಗಳ ಅವಕಾಶಗಳ ಹಿನ್ನೆಲೆಯಲ್ಲಿ ಅನಾವರಣಗೊಂಡವುಗಳು. ಅಲ್ಲಿ ಬಳಕೆಯಾಗುವ ಕಲ್ಲು ಮಣ್ಣು ಮರ ಚರ್ಮ ಅಲ್ಲೆಲ್ಲಾ ಬರೆದ ಹಾಗೂ ಕೊರೆದ ಚಿತ್ರಗಳು ಮನುಷ್ಯನಲ್ಲಿನ ಧಾರ್ಮಿಕ ಭಾವನೆಗಳನ್ನು ವ್ಯಕ್ತಪಡಿಸುವುದರ ಜೊತೆಗೆ ಹಲವು ಮೂಢನಂಬಿಕೆಗಳ ಜೊತೆಜೊತೆಯಲ್ಲಿ ಬೆಳೆದುಬಂದ ಮಾಟ–ಮಂತ್ರ ಇತ್ಯಾದಿ ಭಾವನೆಗಳನ್ನು ಅಭಿವ್ಯಕ್ತಿಸಿರುವುದು ವ್ಯಕ್ತವಾಗುತ್ತದೆ.

ದೇವಸ್ಥಾನದ ಗೋಡೆಗಳು, ಮನೆಯ ಗೋಡೆಗಳು, ಬಂಡೆಕಲ್ಲು ಚಪ್ಪಡಿ, ಮನೆಯ ಬಾಗಿಲು, ದೇವಸ್ಥಾನದ ಬಾಗಿಲು, ಅಡುಗೆ ಮನೆಯ ವಸ್ತುಗಳು, ರಂಗವಲ್ಲಿ, ಓಲೆಗರಿಯ ಚಿತ್ರಗಳು, ಜನಪದ ಆಟಿಕೆಗಳು, ಹುಲಿವೇಷ, ಯಕ್ಷಗಾನ ವೇಷಭೂಷಣಗಳು, ಮುಖವಾಡಗಳು, ಹಚ್ಚೆ ಇತ್ಯಾದಿ ಇತ್ಯಾದಿಗಳನ್ನು ಗಮನಿಸುವಾಗ ಭಾರತೀಯ ಸಂಸ್ಕೃತಿಯಲ್ಲಿ ಜಾನಪದ ಪ್ರತಿಭೆಯ ವೈವಿಧ್ಯ ಎದ್ದು ಕಾಣುತ್ತದೆ. ಹಾಗೂ ತೊಗಲುಗೊಂಬೆ ಮತ್ತು ಸೂತ್ರದಗೊಂಬೆ ಆಟಗಳಲ್ಲಿನ ಚಿತ್ರಕಲಾ ವೈಭವ ಭಾರತೀಯ ಸಂಸ್ಕೃತಿಯ ಸಾರವನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿವೆ. ಅಲ್ಲಿಯ ಚಿತ್ರಗಳಲ್ಲಿ ಕೆತ್ತನೆಯ ಕೆಲಸದಲ್ಲಿ ಜನಪದರ ಪ್ರತಿಭೆ ವೈವಿಧ್ಯವನ್ನು ಮೆರೆದಿದೆ.

ಆಹಾರ ಮತ್ತು ಆಶ್ರಯಕ್ಕಾಗಿ ಬೇಟೆಯನ್ನೇ ತಮ್ಮ ವೃತ್ತಿಯಾಗಿಸಿಕೊಂಡಿದ್ದ ಆದಿಮಾನವ ಅಲ್ಲಿಯ ಅನುಭವಗಳನ್ನು, ಪ್ರಕೃತಿಯ ಚಿತ್ರಗಳನ್ನು ವಸ್ತುವಾಗಿಸಿಕೊಂಡು ವಿವಿಧ ಮಾಧ್ಯಮದ ಮೂಲಕ ಅಭಿವ್ಯಕ್ತಿಗೊಳಿಸಲು ಪ್ರಾರಂಭಿಸಿದ. ಇವೆಲ್ಲದರ ಮೂಲ ಅವರಲ್ಲಿದ್ದ ಸಮಾನ ಅವಕಾಶಗಳು, ಸಮಾನ ಅನುಭವಗಳು ಹಾಗೂ ಸೀಮಿತ ಅಭಿವ್ಯಕ್ತಿ ಮಾಧ್ಯಮಗಳು. ಬಹುತೇಕ ಸಮಾನ ಆಶಯಗಳನ್ನು ವಸ್ತುವಾಗಿಸಿಕೊಂಡಿದ್ದವು. ನಂತರ ಕಾಲ ಸರಿದಂತೆ, ಅವಕಾಶ ಒದಗಿದಂತೆ, ಅನುಭವಗಳು ಹೆಚ್ಚಾದಂತೆ, ಮಾಧ್ಯಮಗಳು ಭಿನ್ನವೆನಿಸಿದವು. ಆದರೆ ಅಂತರಾತ್ಮದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ ಎಂಬುದು ಗಮನೀಯ.

ಭಾರತೀಯ ಜನಪದ ನೃತ್ಯ ಬಗೆಗಳು ವಿಶ್ವವನ್ನೇ ಆಕರ್ಷಿಸಿ ಬೆರಗುಗೊಳ್ಳುವಂತೆ ಮಾಡಿದೆ. ಭಾರತದ ಅಷ್ಟು ರಾಜ್ಯಗಳಲ್ಲಿ ಕಂಡುಬರುವ ಜನಪದ ಬಗೆಗಳು ವೈವಿಧ್ಯದಿಂದ ಹೊಂದಿದ್ದು ಅಚ್ಚರಿ ಮೂಡಿಸುತ್ತವೆ. ವೃತ್ತಿ ದೈವ ಸಂಬಂಧದೊಂದಿಗೆ ಸಾಂಸ್ಕೃತಿಕವಾಗಿ ಹುಟ್ಟಿಕೊಂಡಿರುವ ಜನಪದ ನೃತ್ಯಗಳು ಅಭಿನಯ ವೇಷಭೂಷಣ ನೃತ್ಯ ಸಂಗೀತಗಳೊಂದಿಗೆ ಬೆರೆತು ಆಯಾ ಭಾಗದ ವಿಶಿಷ್ಟ ಸಂಪ್ರದಾಯ ಸಂಸ್ಕೃತಿಗಳಿಗೆ ಸಾಕ್ಷಿಯಂತಿವೆ.

ಬಿಹಾರಿನ ಮಧುಬನಿ ಪೇಂಟಿಂಗ್, ಮಹಾರಾಷ್ಟ್ರದ ವರ್ಲಿ ಪೇಂಟಿಂಗ್ಸ್, ಒರಿಸ್ಸಾದ ಪಟ್ಟ ಚಿತ್ರ, ತಮಿಳುನಾಡಿನ ತಂಜಾವೂರ ಪೇಂಟಿಂಗ್ಸ್, ಆಂಧ್ರದ ಕಲಂಕಾರಿ, ಮಧ್ಯಪ್ರದೇಶದ

ಗೊಂಡ ಪೇಂಟಿಂಗ್ಸ್ ಮುಂತಾದವುಗಳಲ್ಲಿ ಜಾನಪದ ಸಂಸ್ಕೃತಿಯ ವೈಭವ ಗೋಚರಿಸುತ್ತದೆ. ಅಷ್ಟೇ ಏಕೆ, ನಮ್ಮ ಪ್ರಾಚೀನ ದೇವಾಲಯಗಳ ಕಟ್ಟಡಗಳಲ್ಲಿ, ಅಲ್ಲಿಯ ವಿವಿಧ ಕ್ಷೇತ್ರಗಳಲ್ಲಿ, ಕೆತ್ತನೆಯ ಚಿತ್ರಗಳಲ್ಲಿ ಜನಪದ ಪ್ರತಿಭೆ ಹಾಗೂ ಸಾಂಸ್ಕೃತಿಕ ಚಿತ್ರಣ ಅನುರಣನಗೊಂಡಿರುವುದನ್ನು ಕಾಣಬಹುದು. ಇವುಗಳಂತೆಯೇ ಕುಣಿತ, ಸಂಗೀತ, ಆಟಗಳು, ಹಬ್ಬ, ಉಡುಪು, ಅಡುಗೆ ಇತ್ಯಾದಿಗಳಲ್ಲಿ ಜನಪದೀಯ ಸೊಗಡು – ಸೊಬಗು ಅಂತ ರ್ಗಾಮಿಯಾಗಿ ಹರಿದುಬಂದಿದೆ.

ಭಾರತೀಯ ಸಂಸ್ಕೃತಿಯಲ್ಲಿನ ಜಾನಪದ ವೈಭವದ ಜಾತ್ರೆ ಇಂದಿಗೂ ನಿಂತಿಲ್ಲ. ಅದು ನಿರಂತರವಾಗಿ ಹರಿದು ಬಂದಿದೆ. ಅದಕ್ಕೆ ಬಳಸುತ್ತಿರುವ ವಸ್ತು ಬದಲಾಗಿರಬಹುದು, ಆದರೆ ಆಶಯ ಬದಲಾಗಿಲ್ಲ; ತಂತ್ರಗಾರಿಕೆ ಬದಲಾಗಿರಬಹುದು, ಆದರೆ ಉದ್ದೇಶ ಬದಲಾಗಿಲ್ಲ. ನವನವೋನ್ಮೇಷಶಾಲಿಯಾಗಿ ಅದು ಶ್ರೀಮಂತಗೊಂಡು ಬೆಳೆದು ಬರುತ್ತಲೇ ಇದೆ. ಇಂತಹ ಕಡೆಗಳಲ್ಲೆಲ್ಲ ಜಾನಪದ ಬಂದು ಜೀವಂತ ಪಳೆಯುಳಿಕೆ ಅದಕ್ಕೆ ಸಾವಿಲ್ಲ ಎಂಬ ಮಾತನ್ನು ನೆನಪಿಸುತ್ತದೆ. ಕುಶಲ ಕಲೆಗಳಲ್ಲಿ ಕಂಡುಬರುವ ಚಿತ್ರಜಗತ್ತಿನ ಕಲಾವೈಭವ ಅದು ಜನಪದ ಮೂಲದ್ದು ಎಂಬುದನ್ನು ಸ್ಪಷ್ಟಪಡಿಸುತ್ತದೆ.ಅದಕ್ಕೆ ಬಳಕೆಯಾಗುತ್ತಿರುವ ಪ್ರತಿಯೊಂದು ವಸ್ತುವಿನ ಮೇಲೂ ಭಾರತೀಯ ಸಂಸ್ಕೃತಿಯ ಪ್ರತೀಕವೆಂಬಂತೆ ಜಾನಪದ ಮುದ್ರಿತವಾಗಿರುತ್ತದೆ. ಚನ್ನಪಟ್ಟಣದ ಮರದ ಗೊಂಬೆಗಳು, ಮಣ್ಣಿನ ಆಟಿಕೆಗಳು, ರಾಜಸ್ಥಾನದ ಒಡವೆಗಳು, ಕಾಶ್ಮೀರದ ಶಾಲು, ಆಗ್ರಾದ ಚರ್ಮದ ವಸ್ತುಗಳು, ಗೋವಾದ ಸಮುದ್ರತೀರದ ವಸ್ತುಗಳಿಂದ ತಯಾರಿಸಿದ ವಸ್ತುಗಳು, ಮೈಸೂರಿನ ಗಂಧದ ಮರದ ಕೆತ್ತನೆ, ಪಶ್ಚಿಮ ಬಂಗಾಳದ ಟೆರಕೋಟ ಮತ್ತು ಮಣ್ಣಿನಿಂದ ತಯಾರಿಸಿದ ವಸ್ತು ಗಳು; ಅಷ್ಟೇ ಅಲ್ಲ ಬಟ್ಟೆಗಳಲ್ಲಿ ಅನಾವರಣಗೊಳ್ಳುವ ವೈವಿಧ್ಯಮಯವಾದ ಚಿತ್ರಕಲೆಯನ್ನು ನೋಡಿದಾಗ ಭಾರತೀಯ ಸಂಸ್ಕೃತಿಯಲ್ಲಿ ಜನಪದ ಕಲೆ ಹೇಗೆ ಎಷ್ಟು ಬೇರುಬಿಟ್ಟು ಹಾಸು ಹೊಕ್ಕಾಗಿ ಹರಡಿದೆ ಎಂಬುದು ಗೋಚರಿಸದಿರದು. ಆಧುನಿಕ ಕಲಾಜಗತ್ತು ಹೆಚ್ಚು ಆಕರ್ಷಣೆಗೊಂಡಿರುವುದು, ವೈವಿಧ್ಯ ವೈಶಿಷ್ಟ್ಯಗಳನ್ನು ತಾಳಿರುವುದು ಜಾನಪದದಿಂದಲೇ ಎಂಬುದು ಸ್ಪಷ್ಟಗೊಳ್ಳುತ್ತದೆ..

ಇಷ್ಟಕ್ಕೆಲ್ಲ ಕಾರಣ – ಹೊಸತನವೇ ಜೀವನ ಎಂಬುದು. ‘ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ’ ಎಂಬ ಮಾತು ಇಲ್ಲಿ ನೆನಪಿಗೆ ಬರುತ್ತದೆ. ಆ ಕಾರಣ, ಜಾನಪದ ಜಗತ್ತಿನಿಂದ ಆಧುನಿಕ ಜಗತ್ತಿನೆಡೆಗೆ ವಿವಿಧ ರೀತಿಯಲ್ಲಿ , ವಿವಿಧ ರೂಪಗಳಲ್ಲಿ ಜಾನಪದ ಕಾಲಿಡುತ್ತಿದೆ. ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಎನ್ನುವಂತೆ ಹೊಸ ಸಂಸ್ಕೃತಿಯೊಂದಿಗೆ ಹಳೆಯ ಸಂಸ್ಕೃತಿ ಬೆರೆತು ಅದನ್ನು ಮತ್ತಷ್ಟು ಶ್ರೀಮಂತಗೊಳಿಸಿದೆ ಹಾಗು ಹೆಚ್ಚು ವೈವಿಧ್ಯ – ವೈಶಿಷ್ಟ್ಯದಿಂದ


